# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

## ವರದಿ

### “ಕೊಡಗು ನೆರೆ ಹಾವಳಿ ಸಂತ್ರಸ್ತರ ನಿಧಿಗೆ ಜೆಎಸ್‌ಎಸ್ ನೌಕರರ ಒಂದು ದಿನದ ವೇತನ”

ಕೊಳ್ಳೇಗಾಲ: 27-08-2018 – ಕೊಡಗು ಪ್ರದೇಶದಲ್ಲಿ ಪ್ರಾಕೃತಿಕ ವಿಕೋಪದಿಂದ ನಿರಾಶ್ರಿತರಾದವರಿಗೆ ಆರ್ಥಿಕ ನೆರವು ಮತ್ತು ಸಹಕಾರ ನೀಡುವ ಉದ್ದೇಶದೊಂದಿಗೆ ಸಮುಚ್ಛಯದ ಎಲ್ಲಾ ನೌಕರರು ತಮ್ಮ ಒಂದು ದಿನದ ವೇತನವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಮುಖೇನ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡುತ್ತಿರುವುದಾಗಿ ಸಮುಚ್ಛಯದ ಮುಖ್ಯಸ್ಥರಾದ ಪ್ರಾಚಾರ್ಯ ಪ್ರೊ.ಉಮೇಶ ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಇತ್ತೀಚೆಗೆ ಭೀಕರ ಮಳೆಯಿಂದಾಗಿ ಕೊಡಗು ಪ್ರದೇಶಗಳು ಮತ್ತು ಅಲ್ಲಿನ ಜನರು ಅಪಾರ ಪ್ರಮಾಣದ ನಷ್ಟಕ್ಕೆ ಗುರಿಯಾಗಿರುವ ಹಿನ್ನಲೆಯಲ್ಲಿ ಸಂತ್ರಸ್ತರಿಗೆ ಆರ್ಥಿಕ ನೆರವು ಮತ್ತು ಸಹಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತಾನಾಡಿದರು.

ಕೇರಳ ಹಾಗೂ ಕೊಡಗು ಪ್ರದೇಶಗಳಲ್ಲದೆ ವಿವಿಧೆಡೆ ಅತಿವೃಷ್ಟಿ, ನೆರೆಹಾವಳಿ, ಭೂಕುಸಿತಗಳಿಂದ ಸಂತ್ರಸ್ತರು ತಮ್ಮ ಮನೆ, ಆಸ್ತಿಪಾಸ್ತಿ ಸರ್ವಸ್ವವನ್ನು ಕಳೆದುಕೊಂಡು ನಿರ್ಗತಿಕರಾಗಿರುವುದು ದುಃಖದ ವಿಷಯವಾಗಿದೆ. ಸಂತ್ರಸ್ತರೆಲ್ಲರೂ ನಮ್ಮವರೇ ಎಂದು ಭಾವಿಸಿ ಅವರಿಗೆ ಆತ್ಮಸ್ಥೈರ್ಯ ನೀಡುವುದರ ಜೊತೆಗೆ ನಿಮ್ಮೊಂದಿಗೆ ನಾವಿದ್ದೇವೆ ಎಂಬ ಭರವಸೆ ನೀಡಬೇಕಾದ ಸಮಯವಿದು. ಈ ಹಿನ್ನೆಲೆಯಲ್ಲಿ ಸಮುಚ್ಛಯದ ನೌಕರರು ತಮ್ಮ ಒಂದು ದಿನದ ವೇತನ ನೀಡಲು ಒಪ್ಪಿಗೆ ಸೂಚಿಸಿರುವುದಲ್ಲದೆ, ಈ ಶೈಕ್ಷಣಿಕ ವರ್ಷದಲ್ಲಿ ಆಯೋಜಿಸಬೇಕಾಗಿದ್ದ ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವವನ್ನು ಸರಳವಾಗಿ ಆಚರಿಸಿ ಸಮಾರಂಭದ ವೆಚ್ಚವನ್ನು ಉಳಿಸಿಕೊಂಡು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲು ನಿರ್ಧರಿಸಲಾಯಿತು. ಅಲ್ಲದೆ ಕಾಲೇಜಿನ ವಿದ್ಯಾರ್ಥಿ ಸಮೂಹವು ಕೂಡ ಹಣ ಸಂಗ್ರಹಿಸಿ ಆರ್ಥಿಕ ನರೆವು ನೀಡಲು ಮುಂದೆ ಬಂದಿರುವುದಾಗಿ ತಿಳಿಸಿದರು.

ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಎನ್ ಮಹದೇವಸ್ವಾಮಿ, ಶುಶ್ರೂಷ ಶಾಲೆ ಪ್ರಾಚಾರ್ಯ ಶ್ರೀ ಡಿ ಜಿ ವಿಷಕಂಠಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೊಡಗು ಪ್ರದೇಶಗಳು ಮತ್ತು ಅಲ್ಲಿನ ಜನರು ಅಪಾರ ಪ್ರಮಾಣದ ನಷ್ಟಕ್ಕೆ ಗುರಿಯಾಗಿರುವ ಹಿನ್ನಲೆಯಲ್ಲಿ ಸಂತ್ರಸ್ತರಿಗೆ ಆರ್ಥಿಕ ನೆರವು ಮತ್ತು ಸಹಕಾರ ಸಭೆ.  ಚಿತ್ರದಲ್ಲಿ ಶ್ರೀ ಎನ್ ಮಹದೇವಸ್ವಾಮಿ, ಪ್ರೊ. ಉಮೇಶ ಹಾಗೂ ಶ್ರೀ ಡಿ ಜಿ ವಿಷಕಂಠಮೂರ್ತಿ ರವರನ್ನು  ಕಾಣಬಹುದು.




ಸಭೆಯಲ್ಲಿ ಭಾಗವಹಿಸಿರುವ ಅಧ್ಯಾಪಕ ಹಾಗೂ ಅಧ್ಯಾಪಕೇತರ ವರ್ಗದವರು

